(*b*), (*c*) and (*d*) It is not possible to undertake this new scheme as there is scarcity of water in sub-reservoir of Tungabhadra.

ಶ್ರೀ ಕೆ. ಯೆಂಕಟಪ್ಪ.—ಸ್ವಾಮಿ, ಈ ತಳಗುಂದ, ಮತ್ತು ಉಡಗಣಿ ಈ ಎರಡು ಹೋಬಳಿಗಳು ಸತತವಾಗಿ ಬರಗಾಲಕ್ಕೆ ಸಿಕ್ಕಿವೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈಗ ಕುಮದ್ವತಿ ನದಿಯಿಂದ (ಮದಗಕೆರೆಯಿಂದ) ಸಾಕಷ್ಟು ನೀರು ದೊರೆಯುತ್ತದೆ. ಆದುದರಿಂದ ಯಾತ ನೀರಾವರಿ ಯನ್ನು ತಳಗುಂದ ಮತ್ತು ಉಡಗಣಿ ಹೋಬಳಿಗಳಿಗೆ ನೀರನ್ನೊಯ್ಯಲು ಯೋಜನೆಯನ್ನು ಮಂಜೂರ ಮಾಡುತ್ತೀರಾ?

ಶ್ರೀ ಡಿ. ದೇವರಾಜ್ ಅರಸ್.—ಈ ಎರಡು ಹೋಬಳಿಗಳು ಆಗಿಂದ್ದಾಗ್ಗೆ ಬರಗಾಲದ ತೊಂದರೆ ಗೊಳಗಾಗುತ್ತವೆ ಎನ್ನುವುದು ಗೊತ್ತಿದೆ. ಈಗ ಮಾನ್ಯ ಸದಸ್ಯರು ಸಾಕಷ್ಟು ನೀರು ಇದೆ ಎಂದು ಏನು ಹೇಳುತ್ತಿದ್ದಾರೆ ಅದು ಸರಿಯಲ್ಲ. ಇವೊತ್ತು ಧಾರವಾಡ ಜಿಲ್ಲೆಯ ಕೆಲವು ಭಾಗಕ್ಕೆ ನೀರನ್ನು ತೆಗೆದುಕೊಂಡು ಹೋಗಬೇಕಾಗುತ್ತದೆ. ಕಾಂಟೂರು ಇರಿಗೇಷನ್, ಲಿಫ್ಟ್ ಇರಿಗೇಷನ್ ಮಾಡಬೇಕು ಎಂದು ಕೇಳುತ್ತಾರೆ. ಇದಕ್ಕೂ ನೀರು ಕೊಟ್ಟು, ಬೇರೆಯ ಕೆಲಸಕ್ಕೆ ನೀರು ಕೊಡುವುದಕ್ಕೆ ನೀರು ಇಲ್ಲ. These are all governed by Krishna Award.

ಶ್ರೀ ಕೆ. ಯಂಕಟಪ್ಪ.—ಸ್ವಾಮಿ, ಎತ ನೀರಾವರಿ ಯೋಜನೆ ಸಮರ್ಪಕವಾಗಿ ಆಗುವುದಿಲ್ಲ ಎಂದು ಹೇಳುವುದಾದರೆ, ಸಾಮೂಹಿಕ ಕೊಳವೆ ಬಾವಿಗಳನ್ನು ಮಂಜೂರು ಮಾಡುವುದಕ್ಕೆ ಆಗಂತ್ತದೆಯೆ ?

ಶ್ರೀ ಡಿ. ದೇವರಾಜ ಅರಸ್.—ಇದು ಗಮನಾರ್ಹವಾದ ಸಲಹೆ ; ಭೂ ಗರ್ಭದಲ್ಲಿ ನೀರು ಇರುವುದನ್ನು ನೋಡಿಕೊಂಡು ; ಆ ಜನಗಳಿಗೆ ಯಾವ ತರಹ ಸಹಾಯ ಮಾಡಬೇಕೋ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜೆ. ಬಿ. ಶಂಕರರಾವ್.—ಈ ಕೆರೆ ನೀರು ನನ್ನ ತಾಲ್ಲೂಕಿಗೆ ಬರುತ್ತದೆ.

ಅಧ್ಯಕ್ಷರು.—ತಾವು ಎಲ್ಲ ಸ್ಥಳೀಯ ಪ್ರಶ್ನೆಗಳಿಗೂ ಪ್ರವೇಶ ಮಾಡುತ್ತೀರಿ ?

ಶ್ರೀ ಜೆ. ಬಿ. ಶಂಕರರಾವ್.—ನನ್ನ ೨೦ ವರ್ಷದ ಅಸೆಂಬ್ಲಿ ಜೀವನದಲ್ಲಿ ಈ ರೀತಿ ನೋಡಲಿಲ್ಲ.

ಶ್ರೀ ಡಿ. ದೇವರಾಜ ಅರಸ್.—ನೀವು ಕೇಳುವುದಕ್ಕೆ ಯಾವ ಆಕ್ಷೇಪಣೆಯೂ ಇಲ್ಲ ಈಗಾಗಲೇ ನಾನು ಉತ್ತರ ಹೇಳಿದ್ದೇನೆ, ನಿಮ್ಮ ಹಕ್ಕು ಯಾವುದು ಮೊಟಕು ಆಗುವುದಿಲ್ಲ. ಆ ಕೆರೆಗಳನ್ನು ತೆಗೆದುಕೊಳ್ಳುವು ದಕ್ಕಾಗುವುದಿಲ್ಲ.

Tank works in Chitapur Taluk, Gulbarga District

247. SRI SHARANAPPA BHAIRY (Shahabad).—Will the Chief Minister be pleased to state.—

(*a*) the number of Tank works in Chitapur Taluk of Gulbarga District Surveyed in 1972-73 ;

(*b*) of them the number of survey Tank works sanctioned for construction ?

SRI D. DEVARAJ URS (Chief Minister).—

(*a*) One tank work is surveyed in 1972-1973.

(*b*) None.

ಶ್ರೀ ಶರಣಪ್ಪ ಭೈರಿ.—(ಅ) ಪ್ರಶ್ನೆಗೆ ಉತ್ತರವಾಗಿ ಒಂದು ಕೆರೆ ಎಂದು ಹೇಳಿದ್ದೀರಿ. ಇದರಲ್ಲಿ ಕೆರೆ ಹೆಸರು ಇಲ್ಲ, ಈ ಕೆರೆ ಅಲ್ಲದೆ, ಮೂರು ಕೆರೆ ಹೆಸರುಗಳನ್ನು ನಾನು ಬರೆದುಕೊಟ್ಟಿದ್ದೆ, ಆ ಮೂರು ಕೆರೆ ಹೆಸರುಗಳು ಇಲ್ಲ. ಅವುಗಳು ಸರ್ವೆ ಆಗಿದೆಯೇ ? ಎಷ್ಟರಮಟ್ಟಿಗೆ ಕೆಲಸ ಆಗಿದೆ ಎನ್ನುವುದನ್ನು ತಿಳಿಸುತ್ತೀರಾ ?

† ಶ್ರೀ ಡಿ. ದೇವರಾಜ ಅರಸ್.—ಈಗ ನೀವು ಮೂರು ಕೆರೆಗಳ ಹೆಸರುಗಳನ್ನು ಬರೆದುಕೊಟ್ಟಿದ್ದೆ ಎಂದು ಹೇಳುತ್ತಿದ್ದೀರಿ. ಅವುಗಳ ಹೆಸರುಗಳು ನನ್ನ ಹತ್ತಿರ ಇಲ್ಲ. ಆ ಮೂರನ್ನು ಸರ್ವೆ ಮಾಡಿಸುತ್ತೇನೆ. ಒಂದೊಂದಾಗಿ ಕೆಲಸ ತೆಗೆದುಕೊಳ್ಳೋಣ.

ಶ್ರೀ ಶರಣಪ್ಪ ಭೈರಿ :—ಒಂದು ಕೆರೆ ಎಂದು ಉತ್ತರದಲ್ಲಿ ಕೊಟ್ಟಿದ್ದೀರಿ? ತಮ್ಮ ಉತ್ತರದಲ್ಲಿ ಅದರ ಹೆಸರು ಸೇರಿಸಿಲ್ಲ.

ಶ್ರೀ ಡಿ. ದೇವರಾಜ ಅರಸ್.—ನ್ಯೂ ಟ್ಯಾಂಕ್ ಮಾವಿನಸೂರ್ ವಿಲೇಜ್ ಅಂತ ಇದೆ.

ಶ್ರೀ ಬಿ. ವಿ. ಕಕ್ಕಿಲಾಯ.—ಅಲ್ಲಿ ನೀರಿನ ಅಭಾವ ಇರುವುದರಿಂದ ಸರ್ವೆ ಆಗಿರತಕ್ಕ ಕೆರೆಗಳನ್ನು ತೆಗೆದುಕೊಳ್ಳುವ ಕಾರ್ಯಯೋಜನೆ ಏನಾದರೂ ಇದೆಯೆ?

ಶ್ರೀ ಡಿ. ದೇವರಾಜ ಅರಸ್.—ಈ ವರ್ಷ ಎಲ್ಲಾ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, ಮುಂದಿನ ವರ್ಷ ತೆಗೆದುಕೊಳ್ಳುವಂತಹ ಆಲೋಚನೆ ಮಾಡಿದ್ದೇವೆ. ಉಳಿದಿರತಕ್ಕ ಕೆರೆಗಳನ್ನು ಇನ್ನು ಎರಡು ವರ್ಷದಲ್ಲಿ ಮುಗಿಸಬೇಕು ಎಂದು ಇದ್ದೇವೆ. ನಾವು ಹಾಕಿರುವ ಯೋಜನೆ ಪ್ರಕಾರ ಹೊರಗಡೆಯಿಂದ ದುಡ್ಡು ಸಹ ಬರಬಹುದೆಂದು ನಿರೀಕ್ಷಣೆ ಇದೆ. ಈಗ ೧೫–೧೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಇನ್ನೂ ಕೂಡ ಹೆಚ್ಚಿಗೆ ಖರ್ಚು ಮಾಡುವ ಉದ್ದೇಶ ಇದೆ, ಇನ್ನು ನಾಲ್ಕು ವರ್ಷದಲ್ಲಿ ಹೊಸ ಕೆರೆಗಳು, ಇರುವ ಕೆರೆಗಳು ಎಲ್ಲವನ್ನು ಮುಗಿಸುವಂತ ದೃಷ್ಟಿಕೋನ ಇಟ್ಟುಕೊಂಡಿದ್ದೇವೆ.

Land granted to Viswabharat Society, Belgaum

356. SRI B. B SAYANAK (Belgaum).—Will the Minister for Revenue be pleased to state.—

(*a*) whether it is a fact that S. No. 163 of Shahapur–Belgaum is granted to Viswabharat Society to construct a Harijan Boarding House;

(*b*) if so when;

(*c*) whether it is a fact that the said society has constructed a Harijan Boarding House;

(*d*) if so, when;

(*e*) whether it is a fact that the said land is asked for by the shoe–maker to constract houses for their community?

SRI B. BASAVALINGAPPA (Minister for Revenue).–

(*a*) Yes.

(*b*) 23rd October 1968.

(*c*) No.

(*d*) Does not arise.

(*e*) No.

SRI B. B. SAYANAK.—You have granted this land on 23–10–1968 and till now that Harijan Boarding House is not constructed. May I know the reason?